# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | 498 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19.02.2024 |
| ಉತ್ತರಿಸುವ ಸಚಿವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಮನಗರ ಜಿಲ್ಲೆ, ಅರ್ಚಕರಹಳ್ಳಿಯಲ್ಲಿನ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ಕಾಮಗಾರಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು? | ಸರ್ಕಾರದ ಆದೇಶ ಸಂಖ್ಯೆ; ಆಕುಕ 15 ಆರ್‌ಜಿಯು 2019, ದಿನಾಂಕ: 01.02.2023ರಲ್ಲಿ ರಾಮನಗರ ಜಿಲ್ಲೆಯ ಅರ್ಚಕರಹಳ್ಳಿಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ಹಾಗೂ ಇತರೆ ಪೂರಕ ಕಟ್ಟಡಗಳ ಕಾಮಗಾರಿಗಳಿಗೆ ರೂ. 600.00 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.<br>ಆರ್‌ಜಿಯುಹೆಚ್‌ಎಸ್‌ರವರ ಆದೇಶ ಸಂಖ್ಯೆ: ರಾಆವಿವಿ /ಅಭಿವೃದ್ಧಿ/ರಾಮನಗರ/2015-16, ದಿನಾಂಕ: 14.02.2023 ರನ್ವಯ ಈ ಕಾಮಗಾರಿಯ ಅಂದಾಜು ಮೊತ್ತದ ಶೇ. 50ರಷ್ಟು ಮೊತ್ತವಾದ ರೂ. 300.00 ಕೋಟಿಗಳನ್ನು ಕಾರ್ಯಪಾಲಕ ಇಂಜಿನಿಯರ್, ಆಕುಕ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ರವರ ಬ್ಯಾಂಕ್ ಖಾತೆಗೆ ಠೇವಣಿಕರಿಸಲು ಆದೇಶಿಸಲಾಗಿದೆ. |
| ಆ) | ವಿಶ್ವವಿದ್ಯಾಲಯದ ಕಾಮಗಾರಿಯನ್ನು ಕೈಗೊಂಡಿದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ; ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಸಮಯಾವಕಾಶ ಬೇಕು? (ಮಾಹಿತಿ ನೀಡುವುದು) | ಸರ್ಕಾರದ ಅದೇಶ ಸಂಖ್ಯೆ: ಎಂಇಡಿ 27 ಆರ್‌ಜಿಯು 2023, ದಿನಾಂಕ: 21.03.2023ರ ಆದೇಶದಲ್ಲಿ ಸದರಿ ಕಾಮಗಾರಿಯನ್ನು ಮೆ: ಸ್ಟಾರ್ ಇನ್‌ಫ್ರಾಟೆಕ್, ಬೆಂಗಳೂರು ರವರಿಗೆ ರೂ. 470.52 ಕೋಟಿಗಳ ಟೆಂಡರ್ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.<br>ಕಾಮಗಾರಿಯ ಪ್ರಥಮ ಹಂತದಲ್ಲಿ ಕಾಂಪೌಂಡ್ ನಿರ್ಮಾಣ ಮತ್ತು ಕಟ್ಟಡಗಳ ಅಡಿಪಾಯ ಕೆಲಸಗಳು ಪ್ರಗತಿಯಲ್ಲಿರುತ್ತವೆ. ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ಒಟ್ಟಾರೆಯಾಗಿ ಮಳೆಗಾಲವು ಸೇರಿದಂತೆ 36 ತಿಂಗಳುಗಳ ಕಾಲ ಸಮಯಾವಕಾಶವನ್ನು ನೀಡಲಾಗಿದೆ. |

ಸಂಖ್ಯೆ: ಎಂಇಡಿ 15 ಆರ್‌ಜಿಯು 2024

(ಡಾ|| ಶರಣಪ್ರಕಾಶ ಆರ್. ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು